(೭) ನೇತ್ರಾವತಿ ಹೊಳೆಗೆ ನಿರ್ಮಿಸುವ ಸೇತುವೆಗೆ ರಸ್ತೆ ನಿರ್ಮಿಸುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ನರಿಕೊಂಬು ಗ್ರಾಮದ ಪುತ್ತೋಟುಬೆಲು ಎಂಬಲ್ಲಿಯ

೧) ಶ್ರೀಕೃಷ್ಣಪಲ್ಯ ೨ ದೇವುಪಲ್ಯ ೩ ಕಮಲ ಸಾಪಲ್ಯ ೪ ಶಾಂತು ಪಲ್ಯ ೫ ವೆಂಕಟಪ್ಪೆ ೬ ಉಮೇಶಪ್ಪೆ ೭ ಬಾವ ಬ್ಯಾರಿ ಎಂಬುವರ ಜಮೀನನ್ನು ನೇತ್ರವಾತಿ ಹೊಳೆಗೆ ನಷೀಕರಿಸುವ ಸೇತುವೆಗೆ ರಸ್ತೆ ನಿರ್ಮಿಸುವ ಬಗ್ಗೆ ಸರಕಾರ ಸ್ವಾಧೀನಪಡಿಸಿರುತ್ತದೆ. ಸ್ಥಳದ ಮೌಲ್ಯಮಾಪನ ಮಾಡಿ ಎರಡು ವರ್ಷಗಳು ಕಳೆದಿರುತ್ತವೆ. ಆದರೆ ವಾಸದ ಮನೆಗಳು ಮತ್ತು ಕೃತಾವಳಿಗಳ ಪರಿಹಾರ ಸಿಕ್ಕಿರುವುದಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗೆ ಅರ್ಜಿ ಸಲ್ಲಿಸಿದಾಗ ಭೂಮಾಪನಾಧಿಕಾರಿ, ಮಂಗಳೂರು ಇವರು ಸೂಕ್ತವಾಗಿ ಸರ್ವೆ ಮಾಡಿ ವಾಸದಮನೆಗಳ ಕೃತಾವಳಿಗಳ ವಿವರವನ್ನು ಸಲ್ಲಿಸಿದ ಪ್ರಕಾರ ಭೂ ಸ್ವಾಧೀನಾಧಿಕಾರಿಗಳು ಬಂದು ಸ್ಥಳ ಪರಿಶೀಲಿಸಿರುತ್ತಾರೆ. ನಂತರ ಕಟ್ಟಿದ ಕೃತಾವಳಿಗಳ ಮೌಲ್ಯಮಾಪನ ಮಾಡಿ ಮಂಜೂರಾತಿಗಾಗಿ ಜಿಲ್ಲಾಧಿಕಾರಿಯವರಿಗೆ ಕಳುಹಿಸಿದಾಗ ಕಡತದಲ್ಲಿರುವ ವಿವರ ಪ್ರಥಮ ನೋಟಿಫಿಕೇಷನಲ್ಲಿ ಇಲ್ಲದಿರುವುದರಿಂದ ಮಂಜೂರಾತಿ ನೀಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಹಣ ಪಾವತಿಸುವುದಕ್ಕೆ ಸಾಧ್ಯವಿಲ್ಲ ಎಂಬುದಾಗಿ ಬಾಯ್ದೆರೆಯಾಗಿ ತಿಳಿಸಿರುತ್ತಾರೆ. ಪ್ರಥಮ ನೋಟಿಫಿಕೇಷನ್‌ನಲ್ಲಿ ಸೇರಿಸದೇ ಇದ್ದರೆ ಯಾರು ಕಾರಣ? ಅಧಿಕಾರಿಗಳು ಮಾಡಿದ ತಪ್ಪಿಗೆ ಜನರನ್ನು ಹೊಣೆಗಾರರನ್ನಾಗಿ ಮಾಡುವುದು ಸರಿಯಲ್ಲ. ಈ ಸಂಬಂಧದಲ್ಲಿ ಜನರನ್ನು ನಿರ್ಗತಿಕರನ್ನಾಗಿ ಮಾಡುವುದನ್ನು ಬಿಟ್ಟು ನ್ಯಾಯ ದೊರಕಿಸಿಕೊಡುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬಿ.ಜೆ.ಪಿ. ಯವರು ಪ್ರಶ್ನೆ ಕೇಳಿದರೆ ಸರ್ಕಾರಕ್ಕೆ ಕೇಳಿಸುವುದಿಲ್ಲವೆ? ಸರ್ಕಾರದ ಕಡೆ ಯಾರೂ ಇಲ್ಲವೆ? ಏನು ನಮ್ಮ ಸರ್ಕಾರದ ಸ್ಥಿತಿ? ಎಲ್ಲಿಗೆ ಹೋಯಿತು ಸ್ವಾಮಿ ನಮ್ಮ ಪರಿಸ್ಥಿತಿ? ಯಾರಿಗೂ ಜವಾಬ್ದಾರಿ ಇಲ್ಲವೆಂದರೆ ಹೇಗೆ? ಇಂಥ ಪರಿಸ್ಥಿತಿ ಇದ್ದರೆ ಹೇಗೆ? ಉತ್ತರ ತರಿಸಿಕೊಡುವುದಕ್ಕೂ ಯಾರೂ ಇಲ್ಲವೆನ್ನುವಂಥ ದುಸ್ಥಿತಿ ನಮ್ಮ ಸರ್ಕಾರಕ್ಕೆ ಬಂದಿದೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ:- ಸನ್ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಸಚಿವರಿಗೆ ಹೇಳಿ ಇದರ ಬಗ್ಗೆ ಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ೪೦ ಮಂದಿ ಮಂತ್ರಿಗಳು ಇದ್ದರೂ ಕೂಡ ನಮಗೆ ಸಿಗಬೇಕಾದ ಉತ್ತರಗಳು ಸರಿಯಾಗಿ ಸಿಗುತ್ತಾ ಇಲ್ಲ. ನಮ್ಮನ್ನು ಅಧ್ಯಕ್ಷರೇ ಕಾಪಾಡಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ...

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಮಾನ್ಯ ಅಧ್ಯಕ್ಷರೇ, ಸಂಬಂಧ ಪಟ್ಟ ಸಚಿವರಿಗೆ ಮಾನ್ಯ ಸದಸ್ಯರು ಎತ್ತಿದ ವಿಚಾರವನ್ನು ಹೇಳಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ೪೦ಜನ ಮಂತ್ರಿಗಳು ಇದ್ದಾರೆ, ಸಕ್ಕರೆ, ಬೆಲ್ಲ, ಎಳ್ಳು, ಹುಣಸೆ ಹಣ್ಣು ಮುಂತಾಗಿ ಇದ್ದಾರೆ ಅವರೆಲ್ಲರೂ ಎಲ್ಲಿಗೆ ಹೋಗಿದ್ದಾರೆ? ಈ ಹಂಚಿಕೆಯಲ್ಲಿ ಏನಾದರೂ ಅಸಮಾಧಾನ ಆಗಿದೆಯೇ? ಏಕೆಂದರೆ ಯಾರೂ ಸರಿಯಾಗಿ ಸಭೆಗೆ ಬರುತ್ತಾ ಇಲ್ಲ. ಈ ೪೦ ಜನರಲ್ಲಿ ಆ ಸದನಕ್ಕೆ ಬೇಕಾದರೆ ೧೫ ಜನರು ಹೋಗಲಿ. ೨೫ ಜನರಾದರೂ

ಇಲ್ಲಿ ಕುಳಿತಿರುವುದು ಬೇಡವೆ? ನನಗೆ ಅರ್ಥವಾಗುತ್ತಾ ಇಲ್ಲ. ಇವರು ಹನಿಮೂನ್‌ಗೆ ಏನಾದರೂ ಹೋಗಿದ್ದಾರೆಯೇ? ಹೊಸದಾಗಿ ಮಂತ್ರಿಗಳಾದ ಮೇಲೆ ಸುಂದರವಾದ ಕಾರ್ ಇತ್ಯಾದಿ ಸಿಕ್ಕಿದೆ ಎಂದು ಓಡಾಟಕ್ಕೆ ಹೋಗಿದ್ದಾರೋ? ಕೆಲವರಿಗೆ ಮನೆಗಳು ಸಿಕ್ಕಿಲ್ಲ ಎಂದು ದೊಡ್ಡ ಮನೆಗಳಲ್ಲಿ ಆಶ್ರಯ ಪಡೆದಿದ್ದಾರೆ. ದೇಶಕ್ಕೆಲ್ಲಾ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಮಂತ್ರಿಗಳಿಗೆ ಮನೆ ಇಲ್ಲ ಎಂದು ಹೇಳುತ್ತಿದ್ದಾರೆ. ಕಾರ್‌ಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ, ಇದೊಂದು ವಿಪರ್ಯಾಸ, ಇದು ಈ ಶತಮಾನದಲ್ಲಿ ಆಗಬಾರದಿತ್ತು.

ಅಧ್ಯಕ್ಷರು:- ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಬೇಕು. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ಹಾಗೆ ವಂದನಾರ್ಪಣ ಪ್ರಸ್ತಾವನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪ

ಶ್ರೀ ಜಿ.ಎಸ್.ಆಚಾರ್:- ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕದ ರಾಜ್ಯಪಾಲರು ಕರ್ನಾಟಕ ವಿಧಾನ ಸಭೆಯಲ್ಲಿ ಮಾಡಿದ ಭಾಷಣಕ್ಕೆ ವಂದನಾರ್ಪಣೆ ಪ್ರಸ್ತಾವವನ್ನು ಮಂಡಿಸುತ್ತೇನೆ. ಫೆಬ್ರವರಿ ೧೨, ೧೯೯೩ ರಂದು ಕರ್ನಾಟಕ ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರುಗಳಾದ ನಾವು ಮಾನ್ಯ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು, ಸದನದ ಅಪ್ಪಣೆಯನ್ನು ಕೋರುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ಫೆಬ್ರವರಿ, ೧೨, ೧೯೯೩ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಮಾನ್ಯ ಜಿ.ಎಸ್. ಆಚಾರ್‌ರವರು ಕೋರಿದ ಅಪ್ಪಣೆಯನ್ನು ನಾನು ಅನುಮೋದಿಸುತ್ತೇನೆ.

ಅಧ್ಯಕ್ಷರು:- ಪ್ರಸ್ತಾವನೆಯನ್ನು ಮಾಡಲು ಅನುಮತಿಯನ್ನು ನೀಡಲಾಗಿದೆ.

ಶ್ರೀ ಜಿ.ಎಸ್.ಆಚಾರ್:- (ಬೈಂದೂರು) ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣ, ರಾಜ್ಯಾಂಗದ ವಿಧಿಯಂತೆ ಪೂರೈಸಬೇಕಾದ, ಸಂವಿಧಾನ ಬದ್ಧವಾದ ಅಗತ್ಯತೆಯಾಗಿದೆ. Just to satisfy the constitutional obligation, ಎಂದು ಹೇಳುವವರೂ ಇದ್ದಾರೆ. ಈ ವಂದನಾರ್ಪಣೆ ಹಾಗೆಯೇ ಒಂದು ಅಬ್ಲಿಗೇಶನ್, ಅದನ್ನು ಮಾಡಬೇಕಾದ ಒಂದು ಅವಕಾಶವು ನನಗೆ ಬಂದುದಕ್ಕಾಗಿ, ನಾನು ಸಂತೋಷವನ್ನು ವ್ಯಕ್ತಪಡಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ರಾಜ್ಯದ ಪ್ರಸ್ತುತ ಮುನ್ನೋಟ ಕುರಿತು, ರಾಜ್ಯದ ಸಮಸ್ಯೆಗಳನ್ನು ಕುರಿತು, ಸಾಮಾಜಿಕ ನ್ಯಾಯ ಕುರಿತು, ಜನಜೀವಾಳದ ಅಭಿವೃದ್ಧಿಯ ಚಿಂತನೆಯ ಕುರಿತು, ವರ್ಷಾರಂಭದಲ್ಲಿ ವೈಚಾರಿಕತೆಯ ರೂಪರೇಶೆಯನ್ನು ನೀಡುವುದು ಅಗತ್ಯ. ಅಂಥ ಅಗತ್ಯತೆಯನ್ನು ಪೂರೈಸಿದ್ದಕ್ಕಾಗಿ ನಮ್ಮ ಸನ್ಮಾನ್ಯ ರಾಜ್ಯಪಾಲರನ್ನು ನಾವು ಅಭಿನಂದಿಸಬೇಕಾಗಿದೆ. ನಮ್ಮನ್ನು ಆಯ್ಕೆ ಮಾಡಿದ ಜನರು, ನಮ್ಮಿಂದ, ಸರಕಾರದಿಂದ, ಅಪಾರವಾದ ನಿರೀಕ್ಷೆಯನ್ನು ಮಾಡುತ್ತಾ ಇದ್ದಾರೆ. ಆ ಒಂದು ಗುರಿಯತ್ತ ನಾವು ತಲುಪಬೇಕಾಗಿದೆ. ಜನಸಾಮಾನ್ಯರ ಹರಕೆಯ ಹಾರೈಕೆ, ಸದಾಶಯ, ಸದ್ಭಾವನೆ, ಶುಭಾಶೀರ್ವಾದಗಳನ್ನು ಹೊತ್ತು, ಜನಮನವನ್ನು ಸ್ಪಂದಿಸುವ ಮಹದಾಶಯದಿಂದ, ಅಧಿಕಾರವನ್ನು ಸ್ವೀಕರಿಸಿದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ವೀರಪ್ಪ ಮೊಯಿಲಿಯವರು